ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 ದಿನಾಂಕ: 20–02–2019

# ಪತ್ರಿಕಾ ಆಮಂತ್ರಣ

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ನಿರುದ್ಯೋಗ ಯುವಕ ಯುವತಿಯರಿಗೆ ಪ್ರವಾಸಿ ಟ್ಯಾಕ್ಸಿ ವಿತರಣಾ ಕಾರ್ಯಕ್ರಮ:

**ಪ್ರವಾಸಿ ಟ್ಯಾಕ್ಸಿಗಳಿಗೆ ಹಸಿರು ನಿಶಾನೆ:**

ಹೆಚ್.ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

**ಅಧ್ಯಕ್ಷತೆ:**
ಆರ್.ರೋಷನ್ ಬೇಗ್,
ಶಾಸಕರು,
ಶಿವಾಜಿನಗರ ವಿಧಾನಸಭಾ ಕ್ಷೇತ್ರ

**ಮುಖ್ಯ ಅತಿಥಿಗಳು:**

ಡಿ.ವಿ. ಸದಾನಂದಗೌಡ, ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು.
ಭಾರತ ಸರ್ಕಾರ.
ಶ್ರೀಮತಿ ನಿರ್ಮಲಾ ಸೀತಾರಾಮನ್,
ರಕ್ಷಣಾ ಸಚಿವರು, ಭಾರತ ಸರ್ಕಾರ.

ದಿನಾಂಕ: 21–02–2019 ಗುರುವಾರ, ಸಮಯ ಬೆಳಿಗ್ಗೆ 11.30 ಗಂಟೆಗೆ

ಸ್ಥಳ: ಪೂರ್ವದ್ವಾರ, ವಿಧಾನಸೌಧ ಪ್ರಾಂಗಣ, ಬೆಂಗಳೂರು

2. ಹನ್ನೊಂದನೇ ಬೆಂಗಳೂರು ಅಂತರ ರಾಷ್ಟ್ರೀಯ ಸಿನಿಮೋತ್ಸವ
ಉದ್ಘಾಟನೆ:
ಹೆಚ್. ಡಿ. ಕುಮಾರಸ್ವಾಮಿ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಗೌರವ ಅತಿಥಿ:
ಅನಂತನಾಗ್, ಸಪ್ತಭಾಷಾ ಚಲನಚಿತ್ರ ಕಲಾವಿದರು
ರಾಹುಲ್ ರವೈಲ್,ಖ್ಯಾತ ಚಲನಚಿತ್ರ ನಿರ್ದೇಶಕರು

ಮುಖ್ಯ ಅತಿಥಿಗಳು:
ಡಾ: ಜಿ. ಪರಮೇಶ್ವರ್, ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಡಾ: ಜಯಮಾಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಅಧ್ಯಕ್ಷತೆ:
ಆರ್. ರೋಷನ್‌ಬೇಗ್ ಶಾಸಕರು, ಶಿವಾಜಿನಗರ

ದಿನಾಂಕ: 21-02-2019 ಗುರುವಾರ ಸಂಜೆ 6-00 ಗಂಟೆಗೆ
ಸ್ಥಳ: ಔತಣ ಸಭಾಂಗಣ, ವಿಧಾನ ಸೌಧ, ಬೆಂಗಳೂರು

## ಪತ್ರಿಕಾ ಪ್ರಕಟಣೆ

# ಲಾಂಛನ ರಚಿಸಲು ರಾಜ್ಯಮಟ್ಟದ ಸ್ಪರ್ಧೆ

ಬೆಂಗಳೂರು, ಫೆಬ್ರವರಿ 20 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖಾಂತರ ಈ ನಾಡಿನ ಹೆಸರಾಂತ ಸಾಹಿತಿಗಳಾದ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ ಬದುಕು-ಬರಹ ಹಾಗೂ ಅವರ ಪರಿಸರ ಕಾಳಜಿಯನ್ನು ಯುವ ಜನಾಂಗಕ್ಕೆ ತಲುಪಿಸುವ ಸದುದ್ದೇಶದಿಂದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನವನ್ನು ರಚಿಸಲಾಗಿದೆ.

ಈ ಪ್ರತಿಷ್ಠಾನಕ್ಕೆ ಲಾಂಛನ ರಚಿಸಲು ರಾಜ್ಯಮಟ್ಟದ ಸ್ಪರ್ಧೆ ಏರ್ಪಡಿಸಿದೆ. ಈ ಲಾಂಛನವು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಮನೋಧರ್ಮ, ಆಸಕ್ತ, ಹವ್ಯಾಸ ಹಾಗೂ ಅವರ ಒಟ್ಟು ಸಾಹಿತ್ಯವನ್ನು ಬಿಂಬಿಸುವಂತಿರಬೇಕು.

ಪ್ರತಿಷ್ಠಾನದ ಅಧ್ಯಕ್ಷರು, ಸದಸ್ಯರು ಹಾಗೂ ತಜ್ಞರನ್ನೊಳಗೊಂಡ ಸಮಿತಿಯು ಲಾಂಛನವನ್ನು ಆಯ್ಕೆ ಮಾಡಲಿದ್ದು, ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ ಹಾಗೂ ಆಯ್ಕೆಯಾದ ಲಾಂಛನದ ಹಕ್ಕು ಸ್ವಾಮ್ಯವು ಪ್ರತಿಷ್ಠಾನದ್ದಾಗಿರುತ್ತದೆ. ಅತ್ಯುತ್ತಮ ಲಾಂಛನವನ್ನು ರಚಿಸಿ, ಆಯ್ಕೆಯಾದ ಕಲಾವಿದರಿಗೆ ಪ್ರತಿಷ್ಠಾನದ ವತಿಯಿಂದ ರೂ 10,000 (ಹತ್ತು ಸಾವಿರ) ಬಹುಮಾನ ನೀಡಲಾಗುವುದು.

ಆಸಕ್ತರು ಮಾರ್ಚ್ 15 ರ ಒಳಗಾಗಿ ಲಾಂಛನವನ್ನು ರಚಿಸಿ "ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕುವೆಂಪು ಕಲಾಮಂದಿರ, ಚಿಕ್ಕಮಗಳೂರು – 577 101" ಈ ವಿಳಾಸಕ್ಕೆ ತಲುಪಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ 08262--31372 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಅಧೀಕ್ಷಕರ ಮುಂಬಡ್ತಿ
# ಬ್ಯಾಕ್‌ಲಾಗ್ ಹುದ್ದೆಗಳ ಬಡ್ತಿ

ಬೆಂಗಳೂರು, ಫೆಬ್ರವರಿ 20 (ಕರ್ನಾಟಕ ವಾರ್ತೆ)

ಕಾರ್ಮಿಕ ಇಲಾಖೆಯಲ್ಲಿ ಅಧೀಕ್ಷಕರ ಮುಂಬಡ್ತಿ ಬಾಕ್‌ಲಾಗ್ ಹುದ್ದೆಗಳು ಪರಿಶಿಷ್ಟ ಜಾತಿಗೆ ಎರಡು (02) (1 – ಹೈ.ಕ) ಹಾಗೂ ಪರಿಶಿಷ್ಟ ಪಂಗಡಕ್ಕೆ ಎರಡು (02) ಹುದ್ದೆಗಳಿದ್ದು, ಇವುಗಳಿಗೆ ಅರ್ಹ ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರುಗಳಿಗೆ ಅಭಿಮತ ನೀಡಲು ಸೂಚಿಸಲಾಗಿತ್ತು.

ಸದರಿ ಹುದ್ದೆಗಳಿಗೆ ಇದುವರೆಗೂ ಯಾರೂ ಅಭಿಮತ ವ್ಯಕ್ತಪಡಿಸಿರುವುದಿಲ್ಲ. ಆದ್ದರಿಂದ ಇಚ್ಛೆವುಳ್ಳ ಅರ್ಹ ನೌಕರರು ಏಳು (7) ದಿನಗಳೊಳಗಾಗಿ ಕಾರ್ಮಿಕ ಆಯುಕ್ತರಿಗೆ ಅಧೀಕ್ಷಕರ ಹುದ್ದೆಗೆ ಅಭಿಮತ ಸಲ್ಲಿಸಬಹುದಾಗಿದೆ ಎಂದು ಕಾರ್ಮಿಕ ಇಲಾಖೆ ಪ್ರಕಟಣೆ ತಿಳಿಸಿದೆ.

## ಎಸಿಬಿ ದಾಳಿ

ಬೆಂಗಳೂರು, ಫೆಬ್ರವರಿ 20 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ಆರ್.ಪಿ.ಸಿ ಲೇಔಟ್‌ನ ನಿವಾಸಿಯಾಗಿರುವ ವೈದ್ಯರು ಬಿಡದಿ ಹೋಬಳಿ, ಮಂಚನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಬಿಲ್ಲ ಕೆಂಪನಹಳ್ಳಿ ಸರ್ವೆ ನಂ.43/6 ರಲ್ಲಿ 0-33 ಗುಂಟೆ ಕೃಷಿ ಜಮೀನು ಹೊಂದಿದ್ದು, ಸದರಿ ಕೃಷಿ ಜಮೀನನ್ನು ಹಾಸ್ಪಿಟಲ್ ನಿರ್ಮಾಣದ ಉದ್ದೇಶಕ್ಕಾಗಿ ವಾಣಿಜ್ಯ ಉಪಯೋಗದ ಬದಲಾವಣೆ ಮಾಡಿಸಲು ಮೂಲಭೂತ ಸೌಕರ್ಯಗಳ ಬಗ್ಗೆ ಎನ್.ಓ.ಸಿ ಪಡೆಯಲು ಮಂಚನಾಯಕನಹಳ್ಳಿ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ, ಶ್ರೀ.ಶಮೀದ್ ಓಲೆಕರ್, ಪಂಚಾಯ್ತಿ ಅಭಿವೃದ್ದಿ ಅಧಿಕಾರಿ, ಮಂಚನಾಯ್ಕನಹಳ್ಳಿ ಗ್ರಾಮ ಪಂಚಾಯ್ತಿ ರವರು ಎನ್.ಓ.ಸಿ ನೀಡಲು ರೂ.1,00,000/- ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತಾರೆ.

ದಿನಾಂಕ:20-02-2019 ರಂದು ಶ್ರೀ.ಶಮೀದ್ ಓಲೆಕಾರ್ ರವರು ದೂರುದಾರರಿಂದ ರೂ.1,00,000/- ಲಂಚದ ಹಣವನ್ನು ಸ್ವೀಕರಿಸಿದ್ದು, ಎಸಿಬಿ ರಾಮನಗರ ಜಿಲ್ಲಾ ಠಾಣೆಯ ಅಧಿಕಾರಿಗಳು ದಾಳಿ ನಡೆಸಿರುತ್ತಾರೆ. ಲಂಚದ ಹಣವನ್ನು ಸ್ವಾಧೀನಪಡಿಸಿಕೊಂಡು ಇವರನ್ನು ದಸ್ತಗಿರಿ ಮಾಡಿದ್ದು, ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.